## ಹೆಂಡತಿಯನ್ನ ಬೈಯ್ತಿದ್ದೆ...

ರಮೇಶ ಬೆಳಗಿನ ವಾಕಿಂಗ್ ಮುಗಿಸಿ ಬರುತ್ತಿರುವಾಗ ಪಕ್ಕದ ಮನೆಯ ಸುರೇಶ, 'ಏನ್ಸಾರ್, ನಿನ್ನೆ ರಾತ್ರಿ ನಿಮ್ಮ ಮನೆಯಿಂದ ನಿಮ್ಮ ಮಾತು ಬಹಳ ಜೋರಾಗಿ ಕೇಳಿಸ್ತಿತ್ತು' ಎಂದು ಕುತೂಹಲದಿಂದ ಕೇಳಿದ. ಅದಕ್ಕೆ ರಮೇಶ, 'ಹೌದು ಕಣಯ್ಯಾ, ನನ್ನ ಹೆಂಡತಿಯನ್ನ ಬೈಯ್ತಿದ್ದೆ' ಎಂದ. ರಮೇಶನ ಮಾತಿಗೆ ಆಶ್ಚರ್ಯಚಕಿತನಾದ ಸುರೇಶ, 'ಏನ್ ಹೇಳ್ತಿದ್ದೀರಾ ಸಾರ್, ಎರಡು ದಿನಗಳ ಹಿಂದೆ ನಿಮ್ಮ ಹೆಂಡತಿ ಊರಿಗೆ ಹೋಗಿದ್ದಾರಲ್ವಾ?' ಎಂದ. ರಮೇಶ ಕೋಪದಿಂದ, 'ಹೌದು, ಅದಕ್ಕೆ ಧೈರ್ಯದಿಂದ ಅವಳ ಫೋಟೊಗೆ ಮನಸೋ ಇಚ್ಛೆ ಬೈಯ್ತಿದ್ದೆ' ಎಂದಾಗ ಸುರೇಶ ಮಾತು ಬೆಳೆಸಲಿಲ್ಲ!

**ವಿ. ವಿಜಯೇಂದ್ರ ರಾವ್**



ಚಿತ್ರಗಳು: ಗಣೇಶ ಆಚಾರ್ಯ



## ಅಮ್ಮನ ಸುಳ್ಳು

ಪುಟ್ಟುನ ಅಮ್ಮ ಮತ್ತು ಅತ್ತೆ ಮಾತಾಡುತ್ತಿದ್ದರು. ಪುಟ್ಟು ತನ್ನ ಅತ್ತೆಯನ್ನೇ ದಿಟ್ಟಿಸುತ್ತ ನಿಂತಿದ್ದ. 'ಏನೊ ಪುಟ್ಟೂ ಹಾಗೆ ನನ್ನನ್ನೇ ನೋಡ್ತಾ ಇದ್ದೀಯಾ?' ಎಂದು ಕೇಳಿದಳು ಅತ್ತೆ. 'ಏನಿಲ್ಲ ಅತ್ತೆ, ಈ ಅಮ್ಮ ಬಹಳ ಸುಳ್ಳು ಹೇಳ್ತಾರೆ' ಎಂದ ಪುಟ್ಟು ಅತ್ತೆಯನ್ನ ನೋಡುವುದನ್ನೇ ಮುಂದುವರಿಸಿದ. 'ಏಯ್... ನಾನೆಲ್ಲೋ ಸುಳ್ಳು ಹೇಳಿದೆ' ಅಂದಳು ಅಮ್ಮ.
'ಮತ್ತೆ, ನಿಮ್ಮತ್ತೆಗೆ ಎರಡು ನಾಲಿಗೆ ಅಂದೆ ಆವತ್ತು... ಇಲ್ನೋಡು, ಅವರಿಗೂ ಒಂದೇ ನಾಲಿಗೆ ಇರೋದು' ಅಂದ ಪುಟ್ಟು. ಅತ್ತೆ ಕಣ್ಣು ಕೆಂಪು ಮಾಡಿಕೊಂಡು ಎದ್ದು ಹೋದಳು. ಪಾಪ... ಪುಟ್ಟು!

**ತಲಕಾಡು ಶ್ರೀನಿಧಿ**